ದುರಸ್ಥಿಗೊಳಿಸಲು ಕ್ರಮ ಕೈಗೊಳ್ಳಲಾಗುವುದು.

ಶ್ರೀ ಕೃಷ್ಣಪ್ಪ ಎಂ.ಟಿ : ಮಾನ್ಯ ಅಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ. ಈ ಉತ್ತರ ರೊಟಿನ್ ಆಗಿ ಬರುತ್ತಿದೆ. ಕಳೆದ ಬಾರಿ ನಾನು ಖುದ್ದಾಗಿ ಹೋಗಿ ಪತ್ರ ಬರೆದು ವಿನಂತಿ ಮಾಡಿದ್ದೇನೆ. ಏಕೆಂದರೆ ನನ್ನ ಕ್ಷೇತ್ರ ಸನ್ಮಾನ್ಯ ಮಾಸ್ಟರ್ ಹಿರಣ್ಣಯ್ಯನವರು ಜನಿಸಿದ ಜನ್ಮಸ್ಥಳ. ಅಲ್ಲಿ ಬಹಳ ಕಲಾವಿದರಿದ್ದಾರೆ . ದಿವಂಗತ ಬೈರಪ್ಪಾಜಿ ಹಾಗೂ ಲೋಕಸಭೆ ಸದಸ್ಯರಾಗಿದ್ದ ದಿವಂಗತ ಲಕ್ಕಪ್ಪರವರ ಅವಧಿಯಲ್ಲಿ ಒಂದು ಉತ್ತಮವಾದ ರಂಗಮಂದಿರ ಸ್ಥಾಪಿಸಿದರು. ಅದು ಈಗ ಶಿಥಿಲಗೊಂಡಿದೆ. ಕಳೆದ ಬಾರಿಯೂ ಸಹ ಮಾನ್ಯ ಸಚಿವರು ಇದೇ ಉತ್ತರ ಕೊಟ್ಟಿದ್ದಾರೆ. ಈ ಉತ್ತರ ನನಗೆ ಮೂರನೇ ಬಾರಿ ಬಂದಿದೆ. ಯಾವಾಗ ಕೈಗೆತ್ತಿಕೊಳ್ಳುತ್ತೀರಿ ? ಯಾವಾಗ ಮುಗಿಸುತ್ತೀರಿ ? ಎಂದು ಹೇಳಿದರೆ ತುಂಬಾ ಸಂತೋಷ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಈ ತಿಂಗಳಲ್ಲೇ ಅಂದಾಜು ಪಟ್ಟಿ ತರಿಸಿ ಶಿಥಿಲಗೊಂಡ ರಂಗಮಂದಿರವನ್ನು ಮಾಡುವುದಕ್ಕೆ ನಿರ್ದೇಶನ ಕೊಡುತ್ತೇನೆ.

ಅಧ್ಯಕ್ಷರು : ಆಯಿತು.

ಚಿರತೆ ಹಾವಳಿ ತಡೆಯುವುದು

66 (684) ಶ್ರೀ ಮಂಜು ಎ. (ಅರಕಲಗೂಡು):– ಅರಣ್ಯ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಅರಕಲಗೂಡು ಕ್ಷೇತ್ರದಲ್ಲಿ ಚಿರತೆಯ ಹಾವಳಿ ಜಾಸ್ತಿಯಾಗಿ ಇತ್ತೀಚೆಗೆ ಒಂದು ಮಗುವಿನ ತಲೆಬುರುಡೆಯನ್ನು ತಿಂದು ಸಾಯಿಸಿರುವುದು ಸರ್ಕಾರದ ಗಮನದಲ್ಲಿದೆಯೇ ;

ಆ) ಈ ಭಾಗದ ಜನರು ಭಯಭೀತರಾಗಿರುವ ಕಾರಣ ಆ ಚಿರತೆಗಳನ್ನು ಹಿಡಿದು ಬೇರೆ ಯಾವುದಾದರೂ ಕಾಡಿಗೆ ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳಲಾಗುವುದೇ ;

ಶ್ರೀ ಸಿ. ಪಿ. ಯೋಗೇಶ್ವರ (ಅರಣ್ಯ ಸಚಿವರು):–

ಅ) ಹಾಸನ ಜಿಲ್ಲೆಯ ಅರಕಲಗೂಡು ತಾಲ್ಲೂಕಿನ ಸಂತೆಮರೂರು ಗ್ರಾಮದಲ್ಲಿ ಒಬ್ಬ ಬಾಲಕನನ್ನು ಚಿರತೆಯೊಂದು ಹೊತ್ತೊಯ್ದು ಸಾಯಿಸಿದ್ದು. ಇದೊಂದು ಆಕಸ್ಮಿಕ ಘಟನೆಯಾಗಿದೆ. ಈ ವಿಷಯ ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಅ) ನರಭಕ್ಷಕ ಚಿರತೆಯನ್ನು ಸೆರೆಹಿಡಿದು ಸ್ಥಳಾಂತರಿಸಲು ಈಗಾಗಲೇ ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಚಿರತೆಯನ್ನು ಹಿಡಿಯಲು ಎರಡು ಬೋನುಗಳನ್ನು ಇಡಲಾಗಿದ್ದು, ಚಿರತೆಯು ಬೋನಿಗೆ ಬಿದ್ದಿರುವುದಿಲ್ಲ. ಆದಾಗ್ಯೂ, ಸ್ಥಳೀಯ ಇಲಾಖಾ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಸ್ಥಳದಲ್ಲೇ ಇದ್ದು ಕಾರ್ಯಾಚರಣೆ ನಡೆಸುತ್ತಿದ್ದು, ಮುಂದೆ ಸದರಿ ಚಿರತೆಯಿಂದ ಯಾವುದೇ ಅನಾಹುತ ಉಂಟಾಗದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗಿದೆ. ಚಿರತೆ ಸುಳಿದಾಡುವ ಪ್ರದೇಶಗಳಲ್ಲಿ ರಾತ್ರಿ ಗಸ್ತು ಕೂಡ ಮಾಡಲಾಗುತ್ತಿದೆ. ಅಲ್ಲದೆ, ಪೊಲೀಸ್ ಇಲಾಖೆಯ ಸಹಕಾರವನ್ನು ಪಡೆದುಕೊಂಡು ಸುತ್ತುಮುತ್ತಲ ಗ್ರಾಮಗಳ ಜನರಿಗೆ ಸೂಕ್ತ ಎಚ್ಚರಿಕೆ ವಹಿಸಲು ಮೈಕ್ ಮೂಲಕ ಮನವಿ ಮಡಲಾಗಿದೆ.

ಶ್ರೀ ಮಂಜು ಎ. : ಮಾನ್ಯ ಅಧ್ಯಕ್ಷರೆ, ಮಾನ್ಯ ಅರಣ್ಯ ಸಚಿವರು ಕೊಟ್ಟಿರುವ ಉತ್ತರ ಸಮರ್ಪಕವಾಗಿಲ್ಲ. ಬಹುಶಃ ನಾನು ಕೇಳಿರುವ ಪ್ರಶ್ನೆ ಮೊದಲನೆ ಪ್ರಶ್ನೆಗೆ ಉತ್ತರ ಕೊಟ್ಟಿದ್ದಾರೆ. ಅರಕಲಗೂಡು ಕ್ಷೇತ್ರದಲ್ಲಿ ಚಿರತೆ ಹಾವಳಿ ಜಾಸ್ತಿಯಾಗಿದ್ದು, ಇತ್ತೀಚೆಗೆ ಚಿರತೆ ಒಂದು ಮಗುವಿನ ತಲೆಬುರುಡೆಯನ್ನು ತಿಂದು ಸಾಯಿಸಿದೆಯೆಂದು ಕೇಳಿದ್ದೆ. ಅದಕ್ಕೆ ಹಾಸನ ಜಿಲ್ಲೆಯಲ್ಲಿನ ಸಂತೆಮರೂರು ಗ್ರಾಮದಲ್ಲಿ ಒಬ್ಬ ಬಾಲಕನನ್ನು ಚಿರತೆ ಹೊತ್ತೊಯ್ದು ಸಾಯಿಸಿರುವುದು ಆಕಸ್ಮಿಕ ಎಂದು ಹೇಳಿದ್ದಾರೆ. ಚಿರತೆ ಬರುವುದಕ್ಕೆ ಕಾರಣವೇನು ? ಎಂದು ಮಾನ್ಯ ಮಂತ್ರಿಗಳು ಹೇಳಬೇಕು. ಕಾಡಿಲ್ಲದ ಜಾಗಕ್ಕೆ ಚಿರತೆ ಬಂದಿರುವ ಬಗ್ಗೆ ತಾವು ಗಮನಹರಿಸಿಲ್ಲ. ಅದರಲ್ಲೇ ಮತ್ತೊಂದು ಪ್ರಶ್ನೆ, ಈ ಭಾಗದ ಜನರು ಭಯಭೀತರಾಗಿರುವ ಕಾರಣ ಆ ಚಿರತೆಗಳನ್ನು ಹಿಡಿದು ಬೇರೆ ಯಾವುದಾದರೂ ಕಾಡಿಗೆ ಸ್ಥಳಾಂತರ ಮಾಡಲು ಕ್ರಮ ಕೈಗೊಳ್ಳಲಾಗುವುದೇ ? ಎಂದು ಕೇಳಿದ್ದೇನೆ. ಅದಕ್ಕೆ ಉತ್ತರ ಕೊಟ್ಟಿರುವುದು, ಮೈಕ್‌ನಲ್ಲಿ announce ಮಾಡಿದ್ದೇವೆ. ಅಲ್ಲೆಲ್ಲಾ ಓಡಾಡುವುದನ್ನು ನಿಲ್ಲಿಸುವಂತೆ ಎಚ್ಚರಿಕೆ ಕೊಟ್ಟಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಚಿರತೆಗೆ ಎಚ್ಚರಿಕೆ ಕೊಟ್ಟಿದ್ದಾರೆಂದು ಹೇಳಿ, ಈ ಉತ್ತರ ಕೊಟ್ಟಿರುವುದನ್ನು ನೋಡಿದರೆ ಮಾನ್ಯ ಸಚಿವರು ಇದರ ಬಗ್ಗೆ ನಿಜವಾಗಿಯೂ ಗಮನಹರಿಸಿಲ್ಲ.

ಶ್ರೀ ಸಿ.ಪಿ. ಯೋಗೇಶ್ವರ : ಮಾನ್ಯ ಅಧ್ಯಕ್ಷರೆ, ಮಂಜುರವರು ಹೇಳಿದ ಹಾಗೆ ಈಗಾಗಲೇ ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕಿನಲ್ಲಿ ಚಿರತೆಗಳ ಹಾವಳಿಯಿರುವುದು ನಮ್ಮ ಗಮನಕ್ಕೆ ಬಂದಿದೆ. ಅದಕ್ಕೆ ಸಂಬಂಧಪಟ್ಟಂತೆ ಇಲಾಖೆಯವರು ಈಗಾಗಲೇ ಸಾಕಷ್ಟು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದಾರೆ. ಅಲ್ಲಿ ಚಿರತೆಗಳನ್ನು ಹಿಡಿಯುವುದಕ್ಕೆ

ಈಗಾಗಲೇ 2–3 ಬೋನ್‌ಗಳನ್ನು ಕೂಡ ಇಟ್ಟಿದ್ದೇವೆ. ಇನ್ನೂ 3–4 ಬೋನ್‌ಗಳನ್ನು ಕಳುಹಿಸಿ ಚಿರತೆಯನ್ನು ಹಿಡಿಯುವುದಕ್ಕೆ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಬಹುಶಃ ಇನ್ನೊಂದು ತಿಂಗಳ ಕಾಲಮಿತಿಯಯೊಳಗೆ ಚಿರತೆಯನ್ನು ಜೀವಂತವಾಗಿಯಾದರೂ ಹಿಡಿದು ಸಾಗಿಸುತ್ತೇವೆ ಅಥವಾ ಅರವಳಿಕೆ ಚುಚ್ಚುಮದ್ದನ್ನಾದರೂ ಕೊಟ್ಟು ಅದನ್ನು ಹಿಡಿಯುತ್ತೇವೆ. ಈ ಕುರಿತು ಇಲಾಖೆಯವರೊಂದಿಗೆ ನಾನು ಚರ್ಚೆ ಮಾಡಿದ್ದೇನೆ. ಚಿರತೆಯಿಂದ ಮೃತಪಟ್ಟ ಬಾಲಕನ ತಂದೆ, ಹಲವಾರು ಪ್ರತಿನಿಧಿಗಳು ಹಾಗೂ ರೈತರೊಂದಿಗೆ ಕೂಡ ನಾನು ಚರ್ಚೆ ಮಾಡಿದ್ದೇನೆ. ನಮ್ಮಲ್ಲಿ ವಿಶ್ವಾಸವಿಡಿ, ಖಂಡಿತ ಇನ್ನೊಂದು ತಿಂಗಳಲ್ಲಿ ಆ ಚಿರತೆಯನ್ನು ಜೀವಂತವಾಗಿಯಾದರೂ ಅಥವಾ ಬೇರೆ ಯಾವುದಾದರೂ ರೀತಿಯಲ್ಲಿ ಅದನ್ನು ಹಿಡಿದು ಸ್ಥಳಾಂತರ ಮಾಡುತ್ತೇವೆ.

ಅಧ್ಯಕ್ಷರು: ಚಿರತೆ ಹಿಡಿಯುವುದಕ್ಕೆ ಅವರಿಗೆ ಬಿಟ್ಟುಬಿಡಿ.

ಶ್ರೀ ಮಂಜು ಎ. : ಅವರನ್ನು ಮೊದಲು ಹಿಡಿಯಬೇಕು ಅಧ್ಯಕ್ಷರೆ, ಇವರು ಹೇಳಿರುವುದು ಒಂದು ಸಾವಾಗಿದೆ, ನಿಜ, ಇದಾದ ನಂತರ ಇನ್ನೊಬ್ಬನ ಮೇಲೆ attack ಮಾಡಿ ತಾಪತ್ರಯವಾಗಿರುವುದು ಕೂಡ ಅವರ ಗಮನಕ್ಕೆ ಬಂದಿದೆ. ಇವರು ಹೇಳಿರುವುದಕ್ಕೆ ಏನು ಕಾರಣವೆಂಬ ಬಗ್ಗೆ ಅವರಿನ್ನೂ ಗಮನಹರಿಸಿಲ್ಲ. Actually ಚಿರತೆ ಬರುವುದಕ್ಕೆ ನಮ್ಮಲ್ಲಿ ಕಾಡಿಲ್ಲ. ನಮ್ಮ ಪಕ್ಕದ ಹೊಳೆನರಸೀಪುರ ತಾಲ್ಲೂಕಿನಲ್ಲಿ ಎಲ್ಲಾ Windmill ಹಾಕಿರುವುದರಿಂದ ಆ ಭಾಗದಿಂದ ಬಂದಿರುವುದು ಜಾಸ್ತಿಯಾಗಿರುವಂತಹದ್ದು. Windmill ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. Windmill ಗಳನ್ನು ನೀವು ಕಾಡಿನಲ್ಲಿ ಹಾಕಿದರೆ, ಪ್ರಾಣಿಗಳು ಊರಿಗೆ ಬರದೆ ಎಲ್ಲಿ ಹೋಗುತ್ತವೆ?

ಶ್ರೀ ಸಿ. ಪಿ. ಯೋಗೇಶ್ವರ್ : ಮಾನ್ಯ ಅಧ್ಯಕ್ಷರೆ, ಚಿರತೆಗಳು ಸಾಮಾನ್ಯವಾಗಿ ಕಾಡಿನಲ್ಲೇ ಏನು ವಾಸ ಮಾಡುವುದಿಲ್ಲ. ಇತ್ತೀಚಿನ ನಮ್ಮ ಮಾಹಿತಿ ಪ್ರಕಾರ ಚಿರತೆಗಳು ಕಬ್ಬಿನ ಗದ್ದೆಗಳಲ್ಲಿ ಮತ್ತು ಪೊದೆಗಳಲ್ಲಿ ಆಶ್ರಯವನ್ನು ಪಡೆಯುತ್ತವೆ. ರಾಜ್ಯದಲ್ಲಿ ಚಿರತೆಗಳ ಗಣತಿಯನ್ನು ಇಲಾಖೆಯಿಂದ ಮಾಡುತ್ತಿದ್ದೇವೆ. ಎಲ್ಲೆಲ್ಲಿ ಚಿರತೆಗಳಿವೆ ಎಂಬ ಮಹಿತಿಯನ್ನು ಮಾಡುತ್ತಿದ್ದೇವೆ. ಇದಕ್ಕೊಂದು rescue team ಸಹ ಮಾಡಿದ್ದೇವೆ. ಈಗಾಗಲೇ ಕೇಂದ್ರ ಸರ್ಕಾರ ಚಿರತೆಗಳನ್ನು ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಮತ್ತು ಸಮೀಕ್ಷೆ ಮಾಡುವ ದೃಷ್ಟಿಯಿಂದ ಈ ವರ್ಷದ ಬಜೆಟ್‌ನಲ್ಲಿ ನಮಗೆ ಅನುಮೋದನೆ ಮಾಡಿದೆ. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದಲ್ಲಿ ವಿಶೇಷವಾದಂತ ವ್ಯವಸ್ಥೆ ಮಾಡಿ, ಚಿರತೆಗಳನ್ನು ಹಿಡಿದು

ಅಲ್ಲಿ ತಂದಿಡುವುದಕ್ಕೆ ಪೂರಕವಾದ ಕೆಲಸವನ್ನು ಮಾಡುತ್ತಿದ್ದೇವೆ. ಶ್ರೀ ಮಂಜುರವರು ಹೇಳಿದಂತೆ ಚಿರತೆ ಹಾವಳಿ windmill ನಿಂದ ಬಂದಿದೆ ಎನ್ನುವುದರ ಬಗ್ಗೆ ನನಗೆ ಯಾವುದೇ ಮಾಹಿತಿಯಿಲ್ಲ.

ಅಧ್ಯಕ್ಷರು : ಪರಿಶೀಲನೆ ಮಾಡಿ.

ಶ್ರೀ ಸಿ. ಪಿ. ಯೋಗೇಶ್ವರ್ : ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇವೆ.

ಶ್ರೀ ನರೇಂದ್ರ : ಮಾನ್ಯ ಅಧ್ಯಕ್ಷರೆ, ಚಿರತೆಗಳ ಹಾವಳಿ ಎಲ್ಲಾ ಕಡೆ ಜಾಸ್ತಿಯಾಗಿದೆ. ಇರುವುದನ್ನು ಕಂಟ್ರೋಲ್ ಮಾಡಿ ಎಂದು ನಾವು ಹೇಳುತ್ತಿದ್ದೇವೆ. ಇವರು ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತಿದ್ದಾರೆ.

ಪ್ರಶ್ನೆ ಸಂಖ್ಯೆ : 67(575)

(ಮಾನ್ಯ ಸದಸ್ಯರಾದ ಶ್ರೀ ರಾಮಸ್ವಾಮಿ ಗೌಡ ಬಿ.ಬಿ. ರವರು ಹಾಜರಿರಲಿಲ್ಲ)

ಜಂಟಿ ನಿರ್ದೇಶಕರ (ಆಡಳಿತ) ಸ್ಥಾನದಲ್ಲಿ ಮುಂದುವರಿಸಿರುವುದು

68 (838) ಶ್ರೀ ತನ್ವೀರ್ ಸೇತ್ (ನರಸಿಂಹರಾಜ):– ಮತ್ತು ಶ್ರೀ ಖಮರುಲ್ ಇಸ್ಲಾಂ (ಗುಲ್ಬರ್ಗಾ ಉತ್ತರ) :– ಕಾರ್ಮಿಕ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಎರಡು ಬಾರಿ ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಲೋಕಾಯುಕ್ತರ ದಾಳಿಗೊಳಗಾಗಿ ಬಂಧಿಸಲ್ಪಟ್ಟು, ಅಮಾನತ್ತುಗೊಂಡು ನ್ಯಾಯಾಲಯದಲ್ಲಿ ತಪ್ಪತಸ್ಥರೆಂದು ಸಾಬೀತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಮೊದಲನೆಯ ಪ್ರಕರಣಕ್ಕಾಗಿ ಸರ್ಕಾರದ ಸೇವೆಯಿಂದ ವಜಾಗೆ ಆದೇಶಿಸಲ್ಪಟ್ಟಿರುವ ಮತ್ತು ಎರಡನೇ ಪ್ರಕರಣಕ್ಕಾಗಿ ಪುನಃ ನ್ಯಾಯಾಲಯದಿಂದ ಒಂದು ವರ್ಷ ಜೈಲು ಶಿಕ್ಷೆಗೆ ಗುರಿಯಾಗಿರುವವರನ್ನು ಇಲಾಖೆಯ ಆಯುಕ್ತರ ನಂತರದ ಪ್ರಮುಖ ಸ್ಥಾನವಾದ ಜಂಟೀ ನಿರ್ದೇಶಕರ (ಆಡಳಿತ) ಹುದ್ದೆಯಲ್ಲಿ ಮುಂದುವರೆಸಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ ಲೋಕಾಯುಕ್ತರ ದಾಳಿಯ ಕುರಿತು ನ್ಯಾಯಾಲಯದ ತೀರ್ಪುಗಳನ್ನು ಕಡೆಗಣಿಸಿ ಸದರಿ ಭ್ರಷ್ಟ ಅಧಿಕಾರಿಯ ಬಗ್ಗೆ ಮೃದು ಧೋರಣೆ ತಾಳಿ ಇಲಾಖೆಯ ಪ್ರಮುಖ ಸ್ಥಾನದಲ್ಲಿ ಮುಂದುವರೆಸಿರುವ ಹಿನ್ನೆಲೆಯನ್ನು ವಿವರಿಸುವುದು ;